# ಕರ್ನಾಟಕ ವೃತ್ತಿ ತರಬೇತಿ ಮತ್ತು ಕೌಶಲ್ಯ ಅಭಿವೃದ್ಧಿ ನಿಗಮ ನಿಯಮಿತ

(ಕರ್ನಾಟಕ ಸರ್ಕಾರದ ಅಧೀನಕ್ಕೊಳಪಟ್ಟಿದೆ)

'ಕೌಶಲ್ಯ ಭವನ', ಡೈರಿ ಸರ್ಕಲ್ ಹತ್ತಿರ, ಬನ್ನೇರುಘಟ್ಟ ರಸ್ತೆ, ಬೆಂಗಳೂರು-29.

ದೂರವಾಣಿ ಸಂಖ್ಯೆ: 080-29522222/29550555

ಇ-ಮೇಲ್: kvtsdccmkkytrg@gmail.com

## ವೃತ್ತಿ ಶಿಕ್ಷಣ ತರಬೇತಿಗಾಗಿ ಪ್ರಸ್ತಾವನೆಗಳ ಆಹ್ವಾನ

ಕರ್ನಾಟಕ ವೃತ್ತಿ ತರಬೇತಿ ಮತ್ತು ಕೌಶಲ್ಯ ಅಭಿವೃದ್ಧಿ ನಿಗಮ ನಿಯಮಿತವು ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಸಹಯೋಗದೊಂದಿಗೆ **ಮಾನ್ಯ ಮುಖ್ಯಮಂತ್ರಿಗಳ ಕೌಶಲ್ಯ ಕರ್ನಾಟಕ ಯೋಜನೆಯಡಿ (CMKKY) ನೊಂದಾಯಿತ ಸ್ತ್ರೀಶಕ್ತಿ ಗುಂಪುಗಳ 1,000 ಮಹಿಳಾ ಸದಸ್ಯರುಗಳಿಗೆ** ರಾಜ್ಯದ ಎಲ್ಲಾ 30 ಜಿಲ್ಲೆಗಳ ಈ ಕೆಳಕಂಡ ವೃತ್ತಿ ಶಿಕ್ಷಣದಲ್ಲಿ ಕರ್ನಾಟಕ ಕೌಶಲ್ಯ ಮಿಷನ್ ನಿಂದ ನೋಂದಾಯಿಸಲ್ಪಟ್ಟ ಹಾಗೂ ಮಾನ್ಯತೆ ಪಡೆದಂತಹ ತರಬೇತಿ ಸಂಸ್ಥೆಗಳು / ಕೇಂದ್ರಗಳಿಂದ ಕೌಶಲ್ಯ ತರಬೇತಿ ನೀಡಲು ಉದ್ದೇಶಿಸಲಾಗಿದೆ.

**ವೃತ್ತಿ ಶಿಕ್ಷಣಗಳ ವಿವರ :**

1) ಅಗ್ರಿಕಲ್ಚರ್, 2) ಅಪರೇಲ್ಸ್,3) ಬ್ಯೂಟಿ ಅಂಡ್ ವೆಲ್‌ನೆಸ್, 4) ಟೋರಿಸಂ ಅಂಡ್ ಹಾಸ್ಪಟಾಲಿಟಿ, 5) ಜ್ಯೂಯಲರಿ 6) ಫೂಡ್ ಪ್ರೋಸೆಸ್, 7) ಹೆಲ್ತ್‌ಕೇರ್, 8) ಲಾಜಿಸ್ಟಿಕ್, 9) ಡೊಮೆಸ್ಟಿಕ್ ವರ್ಕರ್, 10) ಸೆಕ್ಯೂರಿಟಿ

ಅದರಂತೆ ಈ ಕೆಳಕಂಡ ನಿಯಮ ಮತ್ತು ನಿಬಂದನೆಗಳಿಗೆ ಒಳಪಟ್ಟಂತೆ ಪ್ರಸ್ತಾವನೆಗಳನ್ನು ಆಹ್ವಾನಿಸಲಾಗಿದೆ.

1) ರಾಜ್ಯದ ಎಲ್ಲಾ 30 ಜಿಲ್ಲೆಗಳಲ್ಲಿ ತರಬೇತಿ ಸಂಸ್ಥೆಗಳನ್ನು ಹೊಂದಿರುವ ಹಾಗೂ https://www.kaushalkar.com ವೆಬ್ ಸೈಟ್ ನಲ್ಲಿ ನೊಂದಣಿ ಮತ್ತು ಮಾನ್ಯತೆ ಪಡೆದಿರುವ ತರಬೇತಿ ಸಂಸ್ಥೆಗಳು ಮಾತ್ರ ಅರ್ಜಿಯನ್ನು ಸಲ್ಲಿಸಬಹುದಾಗಿರುತ್ತದೆ.
2) ಕೌಶಲ್ಯಾಭಿವೃದ್ಧಿ, ಉದ್ಯಮಶೀಲತೆ ಮತ್ತು ಜೀವನೋಪಾಯ ಇಲಾಖೆ ರಚಿಸಿರುವ ವೃತ್ತಿ ತರಬೇತಿ ಸಂಸ್ಥೆಗಳ ಆಯ್ಕೆಯ ಮಾರ್ಗಸೂಚಿಯಲ್ಲಿನ ಮಾನದಂಡಗಳನ್ವಯ ಮತ್ತು ನಡವಳಿಗಳ ಪ್ರಕಾರ ತರಬೇತಿ ಸಂಸ್ಥೆಯವರನ್ನು ಆಯ್ಕೆಮಾಡಲಾಗುತ್ತದೆ. ಸಿ.ಎಂ.ಕೆ.ಕೆ.ವೈ ಮಾರ್ಗಸೂಚಿಗಳಂತೆ ತರಬೇತಿಗಳನ್ನು ನಡೆಸಿ ಕಾರ್ಯಗತಗೊಳಿಸಬೇಕಾಗಿರುತ್ತದೆ.
3) ತರಬೇತಿ ಸಂಸ್ಥೆಗಳ ಆಯ್ಕೆಗೆ ನಿಗದಿ ಪಡಿಸಿರುವ ಅರ್ಹತೆ ಹಾಗೂ ಮಾನದಂಡ ಹೊಂದಿರುವ ಸಂಸ್ಥೆಗಳು ವೆಬ್ ಸೈಟ್ https://www.kaushalkar.com ನ Checklist ನಲ್ಲಿ ತಿಳಿಸಿರುವ ದಾಖಲಾತಿಗಳನ್ನು ಅಪ್‌ಲೋಡ್ ಮಾಡುವುದು ಹಾಗೂ ವೆಬ್‌ಸೈಟ್‌ಗೆ ಅಪ್‌ಲೋಡ್ ಮಾಡಿದ ದಾಖಲಾತಿಗಳನ್ನು **ದಿನಾಂಕ: 29.10.2019 ರ ಸಂಜೆ 5:30 ಗಂಟೆಯೊಳಗೆ ಸಲ್ಲಿಸತಕ್ಕದ್ದು,** ಕೊನೆಯ ದಿನಾಂಕದ ನಂತರ ಸಲ್ಲಿಸಲಾಗುವ ಪ್ರಸ್ತಾವನೆಗಳನ್ನು ಕಡ್ಡಾಯವಾಗಿ ಪರಿಗಣನೆಗೆ ತೆಗೆದುಕೊಳ್ಳುವುದಿಲ್ಲ.

ಹೆಚ್ಚಿನ ಮಾಹಿತಿಗಾಗಿ https://www.kaushalkar.com ನ್ನು ಸಂದರ್ಶಿಸಬಹುದು ಅಥವಾ ಕಛೇರಿ ವೇಳೆಯಲ್ಲಿ ಖುದ್ದಾಗಿ ಅಥವಾ ದೂರವಾಣಿ ಸಂಖ್ಯೆ: 080-29522222/29550555 ಸಂಪರ್ಕಿಸಬಹುದು.

ದಿನಾಂಕ: 01.10.2019
ಸ್ಥಳ : ಬೆಂಗಳೂರು

ವ್ಯವಸ್ಥಾಪಕ ನಿರ್ದೇಶಕರು
ಕೆ.ವಿ.ಟಿ.ಎಸ್.ಡಿ.ಸಿ